**ಸಾಕ್ಷಿಯನ್ನು ದಿನಾಂಕಃ 22.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಾನ್ಯ ಸರ್ಕಾರಿ ಅಭಿಯೋಜಕರಿಂದ ಮುಂದುವರೆದ ಮುಖ್ಯ ವಿಚಾರಣೆಃ-**

ನಾನು ದೂರು ಕೊಟ್ಟ ನಂತರ ಪೊಲೀಸರು ನಮ್ಮ ಮನೆಯ ಗುನ್ನೆ ಸ್ಥಳದಲ್ಲಿ ಮಹಜರ್ ಮಾಡಿದ್ದಾರೆ, ನಾನು ಸ್ಥಳ ತೋರಿಸಿದೆನು. ಸ್ಥಳದಲ್ಲಿ ನನ್ನ ತಮ್ಮ ಅರುಣ್‌ಕುಮಾರ್ ಈತನ ರಕ್ತ ಬಿದ್ದಿತ್ತು. ಪೊಲೀಸರು ಸದರಿ ರಕ್ತದ ಮಾದರಿಯನ್ನು ಸಂಗ್ರಹ ಮಾಡಿದರು. ನಾನು ನನ್ನ ತಮ್ಮ ಅರುಣ್‌ಕುಮಾರ್ ಈತನ ಟೀ ಷರ್ಟ್ ಮತ್ತು ಜೀನ್ಸ್ ಪ್ಯಾಂಟನ್ನು ಪೊಲೀಸರಿಗೆ ಕೊಟ್ಟಿದ್ದೇನೆ, ಅವುಗಳಿಗೆ ರಕ್ತದ ಕಲೆಗಳಾಗಿತ್ತು.

ಆರೋಪಿತರು ಹಲ್ಲೆಗೆ ಬಳಸಿದ ಮೂರು ದೊಣ್ಣೆಗಳನ್ನು, ಒಂದು ಕಬ್ಬಿಣದ ರಾಡು ಮತ್ತು ಎರಡು ಇಟ್ಟಿಗೆ ತುಂಡುಗಳನ್ನು ಪೊಲೀಸರಿಗೆ ಕೊಟ್ಟಿದ್ದೆನು. ನಾನು ಮಹಜರಿಗೆ ಸಹಿ ಮಾಡಿದ್ದೆನು. ಸಾಕ್ಷಿ ಗುರುತಿಸಿದ ಸ್ಥಳ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಮಾಡಿದಾಗ ಮಧ್ಯಾಹ್ನ 2.00 ರಿಂದ 3.00 ಗಂಟೆಯ ಸಮಯವಾಗಿತ್ತು.

ಮಹಜರ್ ಮಾಡುವಾಗ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಮೂರು ಶೀಟ್ ಗಳಲ್ಲಿರುವ (ಒಟ್ಟು ಹನ್ನೆರಡು) ಫೋಟೋಗಳನ್ನು ನಿಪಿ-3 ರಿಂದ 5 ಎಂದು, ಕಲಂ 65-ಬಿ ಸರ್ಟಿಫಿಕೇಟ್ ಹಾಜರುಪಡಿಸುವ ಷರತ್ತಿನಿಂದ ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಮು.ಮಾ. ಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಹತ್ತಿಕಾಳ ಪ್ರಭು ಎಸ್)
2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.